|

**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ACT0GRT2/15/2023/392

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು – 560001,
ದಿನಾಂಕ:26.06.2023

**:ಸುತ್ತೋಲೆ:**

**ವಿಷಯ:-** ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಇವರು ಅನುದಾನಿತ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಹಿಂದಿನ ಸಾಲುಗಳ ವೇತನವದ ಬಾಕಿ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್‌ಮೂಲಕ ಸಲ್ಲಿಸುವ ಕುರಿತು.

**ಉಲ್ಲೇಖ:-**
1. ಸರ್ಕಾರದ ಪತ್ರ ಸಂ:ಆಇ 01 ಟಿ.ಎಫ್.ಪಿ 2023, ದಿ:09-02-2023.
2. ಈ ಕಛೇರಿ ಏಕ ಕಡತ ಸಂಖ್ಯೆ: DTE-ACT0GRT2/15/2023 (1054032).
3. FD 272 Exp-8/2023, Dated:10.04.2023.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಸರ್ಕಾರದ ಪತ್ರದಲ್ಲಿ 2022-23 ಸಾಲಿನಲ್ಲಿ ವೇತನಕ್ಕಾಗಿ ಒದಗಿಸಿದ ಅನುದಾನದಲ್ಲಿ 2022-23ನೇ ಸಾಲಿನ ವೇತನವನ್ನು ಸೆಳೆಯಲು ಕೊರತೆಯಾಗದಂತೆ ಹಿಂದಿನ ಸಾಲಿನ ಬಾಕಿಯನ್ನು ಸೆಳೆಯಲು ಅನುದಾನ ಲಭ್ಯವಿದ್ದಲ್ಲಿ ಅಂತಹ ಬಾಕಿ ವೇತನಗಳನ್ನು ಸೆಳೆಯಲು ಆರ್ಥಿಕ ಇಲಾಖೆಯ ಅನುಮತಿ ನೀಡಲಾಗಿತ್ತು.

ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ 44 ಅನುದಾನಿತ ಪಾಲಿಟೆಕ್ನಿಕ್ ಹಾಗೂ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಹಿಂದಿನ ಸಾಲುಗಳ ಬಾಕಿ ವೇತನವನ್ನು ಪಾವತಿಸಲು ಪ್ರಸ್ತಾವನೆಗಳು ಸ್ವೀಕೃತಗೊಂಡಿರುತ್ತವೆ. ಈ ಸಂಬಂಧ ಇಲಾಖೆಯ ಹೆಚ್.ಆರ್.ಎಂ.ಎಸ್ ನಲ್ಲಿ ಸದರಿ ಸಿಬ್ಬಂದಿಗಳ ಹಿಂದಿನ ಪೂರ್ಣ ವೇತನ ವಿವರ ನಮೂದಾಗದಿರುವ ಕಾರಣಗಳಿಂದಾಗಿ ಹಿಂದಿನ ವರ್ಷಗಳ ವೇತನ ಬಾಕಿ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್ ನಲ್ಲಿ ಸೃಜಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಈ ವಿಷಯ ತಿಳಿಸಿ, ಉಲ್ಲೇಖಿತ (2) ರಲ್ಲಿ K-2 ನ GIA GENERAL ನಲ್ಲಿ ಹಿಂದಿನ ಸಾಲುಗಳ ಬಾಕಿ ವೇತನವನ್ನು ಪಾವತಿಸಲು ಆರ್ಥಿಕ ಇಲಾಖೆಗೆ ಅನುಮತಿ ಕೋರಲಾಗಿತ್ತು.

ಮುಂದುವರೆದು ಉಲ್ಲೇಖಿತ (3)ರ ಆರ್ಥಿಕ ಇಲಾಖೆಯ ಪತ್ರದಲ್ಲಿ "Administrative Department is advised to first enter the previous year's details in HRMS and then pay arrears through HRMS only." ಎಂದು ತಿಳಿಸಿರುವ ಹಿನ್ನಲೆಯಲ್ಲಿ 44 ಅನುದಾನಿತ ಪಾಲಿಟೆಕ್ನಿಕ್ ಹಾಗೂ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಹಿಂದಿನ ಪೂರ್ಣ ವೇತನ ವಿವರವನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ನಮೂದಿಸಲು ಅಗತ್ಯ ಕ್ರಮವಹಿಸಲು ತಿಳಿಸಲಾಗಿದೆ ಹಾಗೂ ಹಿಂದಿನ ಸಾಲಿನ ವೇತನದ ಬಾಕಿ ಬಿಲ್ಲುಗಳ ಪ್ರಸ್ತಾವನೆಯನ್ನು ಜಿಆರ್‌ಟಿ ವಿಭಾಗದಿಂದ ಪರಿಶೀಲಿಸಿಕೊಂಡು ನಂತರ ಬಿಲ್ಲಿನ ವಿವರಗಳನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ನಮೂದಿಸಿ ಬಿಲ್ಲುಗಳನ್ನು ಸೃಜಿಸಲು ಈ ಮೂಲಕ ತಿಳಿಸಲಾಗಿದೆ.

ಆಯುಕ್ತರು

ಇವರಿಗೆ:-

1. 44 ಅನುದಾನಿತ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ.

2. 10 ಅನುದಾನಿತ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರುಗಳಿಗೆ.
3. ಹೆಚ್.ಆರ್.ಎಂ.ಎಸ್ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.

ಪ್ರತಿ:-

1. ಆಯುಕ್ತರು ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಕಛೇರಿ ಪತ್ರಿ.